

# ಮೂರು ಹಕ್ಕಿಗಳ ಕತೆ

ಒಂದು ದಿನ ಕಾಡಿನಲ್ಲಿ ಆಟವಾಡುತ್ತಿದ್ದಾಗ ಹುಡುಗನೊಬ್ಬ ಕವಣೆಯಿಂದ ಎಸೆದ ಮಣ್ಣಿನ ಉಂಡೆ ಆಕಸ್ಮಿಕವಾಗಿ ಗೂಬೆಗೆ ಬಡಿದು ಅದರ ಗಂಟಲೊಳಗೆ ಸೇರಿಕೊಂಡಿತು. ಗೂಬೆಗೆ ಬಹಳ ನೋವಾಯಿತು. ಮಿತ್ರ ಕಾಗೆ ಅದರ ನೆರವಿಗೆ ಧಾವಿಸಿತು.

'ಚಿಂತಿಸಬೇಡ ಮತ್ತು ನಿನ್ನನ್ನು ಒಳ್ಳೆಯ ವೈದ್ಯರ ಬಳಿಗೆ ಚಿಕಿತ್ಸೆಗೆ ಕರೆದೊಯ್ಯುತ್ತೇನೆ. ಕೋಗಿಲೆ ಒಳ್ಳೇ ಅನುಭವಿ ವೈದ್ಯನೆಂದು ಎಲ್ಲರೂ ಹೇಳುತ್ತಾರೆ. ಅಲ್ಲಿಗೆ ಹೋಗೋಣ' ಎಂದಿತು ಕಾಗೆ.

ಹೀಗೆ ಇಬ್ಬರೂ ಕೋಗಿಲೆಯ ಬಳಿಗೆ ಹೋದರು. ಕೋಗಿಲೆ ಗೂಬೆಯನ್ನು ಪರಿಶೀಲಿಸಿ ನೋಡಿತು. ಮಣ್ಣಿನ ಉಂಡೆ ಅದರ ಗಂಟಲಲ್ಲಿ ಸಿಕ್ಕಿ ಹಾಕಿಕೊಂಡಿರುವುದು ಅದರ ಗಮನ ಸೆಳೆಯಿತು. 'ನಿನಗೆ ಚಿಕಿತ್ಸೆ ನೀಡುತ್ತೇನೆ. ಆದರೆ ನೀನು ನನಗೆ ಚಿಕಿತ್ಸೆಯ ಶುಲ್ಕ ಕೊಡಬೇಕಾಗುತ್ತದೆ' ಎಂದಿತು ಕೋಗಿಲೆ.

ಆದರೆ ಗೂಬೆ ಚಿಕಿತ್ಸೆಯ ಶುಲ್ಕ ತೆರಲು ಒಪ್ಪುತ್ತಿಲ್ಲ. ಶುಲ್ಕ ನೀಡದೆ ತಾನು ಚಿಕಿತ್ಸೆ ಮಾಡುವುದೇ ಇಲ್ಲವೆಂದು ವೈದ್ಯ ಕೋಗಿಲೆ ಹಠ ಹಿಡಿಯಿತು. ಕೊನೆಗೆ ಕಾಗೆ, ಗೂಬೆಯ ಚಿಕಿತ್ಸೆಯ ಶುಲ್ಕಕ್ಕೆ ತಾನು ಜಾಮೀನು ನಿಂತಿತು.

'ನೀನು ತಣ್ಣೀರು ತುಂಬಿದ ತೊಟ್ಟಿಯಲ್ಲಿ ಒಂದು ತಾಸು ನಿಲ್ಲಬೇಕು. ಆಗ ನಿನ್ನ ಗಂಟಲಿನ ನೋವು ನಿವಾರಣೆಯಾಗುತ್ತದೆ' ಎಂದು ವೈದ್ಯ ಕೋಗಿಲೆ ಸಲಹೆ ಮಾಡಿತು. ಗೂಬೆ ಕೋಗಿಲೆಯ ಸಲಹೆಯಂತೆ ನಡೆದುಕೊಂಡಿತು. ಅದು ನೀರಿನಲ್ಲಿ ಮುಳುಗಿ ನಿಂತಾಗ ಮಣ್ಣಿನ ಉಂಡೆ ನಿಧಾನವಾಗಿ ಕರಗಿ ನೀರಲ್ಲಿ ಬೆರೆತಿತು.

ಅದರ ನೋವು ಮಾಯವಾಯಿತು. ಮರುದಿನ ಕೋಗಿಲೆ ಚಿಕಿತ್ಸೆಯ ಶುಲ್ಕ ಪಡೆಯಲು ಗೂಬೆಯ ಬಳಿಗೆ ಬಂದಿತು. ಗೂಬೆ ಶುಲ್ಕ ನೀಡಲು ನಿರಾಕರಿಸಿತು.

'ನೀನೇನು ಮಹಾಚಿಕಿತ್ಸೆ ಮಾಡುವುದು? ಸ್ವಲ್ಪ ಯೋಚಿಸಿದರೆ ಈ ಚಿಕಿತ್ಸೆಯನ್ನು ನಾನೇ ಮಾಡಿಕೊಳ್ಳುತ್ತಿದ್ದೆ' ಎಂದಿತು ಗೂಬೆ.

ಕೋಗಿಲೆಯು ನಿರಾಶೆಯಿಂದ ಜಾಮೀನು ನಿಂತ ಕಾಗೆಯ ಬಳಿ ಹೋಗಿ ತನ್ನ ಅಳಲನ್ನು ತೋಡಿಕೊಂಡಿತು. ಆದರೆ ಕಾಗೆಯು ತನ್ನ ಅಸಹಾಯಕತೆ ವ್ಯಕ್ತಪಡಿಸಿತು. ಚಿಕಿತ್ಸೆಯ ಶುಲ್ಕ ಕೊಡುವಂತೆ ಗೂಬೆಯ ಮನವೊಲಿಸುವುದರಲ್ಲಿ ಅದು ವಿಫಲವಾಯಿತು. 'ಜಾಮೀನುದಾರನಾಗಿ ನೀನು ಹಣ ಕೊಡಬೇಕಾಗುತ್ತದೆ' ಎಂದಿತು ಕೋಗಿಲೆ ಕಾಗೆಯನ್ನು ಉದ್ದೇಶಿಸಿ.

'ನನ್ನ ಬಳಿ ಒಂದು ಪೈಸಾ ಕೂಡಾ ಇಲ್ಲ' ಎಂದಿತು ಕಾಗೆ.

ಕೋಗಿಲೆ ಕೊನೆಗೆ ಬೇರೆ ಯಾವ ಮಾರ್ಗವೂ ತೋಚದೆ ತನ್ನ ಸಮಸ್ಯೆಯ ಪರಿಹಾರಕ್ಕಾಗಿ ಕಾಡಿನ ನ್ಯಾಯಾಧೀಶ ಮೊಲಕ್ಕೆ ದೂರು ಸಲ್ಲಿಸಿತು.

ನ್ಯಾಯಾಧೀಶ ಮೊಲವು ಕಾಗೆ, ಕೋಗಿಲೆ, ಗೂಬೆಯನ್ನು ಬರಹೇಳಿತು. ದೀರ್ಘ ತನಿಖೆಯ ಬಳಿಕ ಅದು ತೀರ್ಪು ಘೋಷಿಸಿತು.

'ಜಾಮೀನು ನಿಂತ ಕಾಗೆ ಗೂಬೆಯ ಪರವಾಗಿ ಕೋಗಿಲೆಗೆ ಹಣ ಪಾವತಿ ಮಾಡಲು ಸಾಧ್ಯವಾಗದಿದ್ದರೆ ಆಯುಷ್ಯದುದ್ದಕ್ಕೂ ಅದು ಕೋಗಿಲೆಗೆ ಸೇವೆ ಸಲ್ಲಿಸಬೇಕು. ಇನ್ನು ಮುಂದೆ ಅದು ಕೋಗಿಲೆಯ ಮೊಟ್ಟೆಗಳನ್ನು ರಕ್ಷಿಸಬೇಕು. ಅದರ ಎಳೆ ಮರಿಗಳನ್ನು ಸಾಕಬೇಕು' ಎಂದು ತೀರ್ಪು ನೀಡಿತು.

ಆದ್ದರಿಂದಲೇ ಕೋಗಿಲೆ, ಇಂದಿಗೂ ಕಾಗೆಯ ಗೂಡಿನಲ್ಲಿ ಮೊಟ್ಟೆ ಇಡುತ್ತದೆ. ಗೂಬೆಯಂತೂ ಭಯಗೊಂಡು ಹಗಲಿಡೀ ಮರದ ಪೊಟರೆಯೊಳಗೆ ಅವಿತುಕೊಂಡಿದ್ದು ರಾತ್ರಿಯಾದ ಬಳಿಕ ಹೊರಗೆ ಬರುತ್ತದೆ.

**–ಶಿವರಾಮ ಭಟ್ ಹತ್ತೊಕ್ಕಲು**